
# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2550/ಶ್ರೀ ಕ್ರೋಧಿ ನಾಮ ಸಂವತ್ಸರ
15-05-2024 ವೈಶಾಖ ಮಾಸ : ಶುಕ್ಲ ಪಕ್ಷ ಬುಧವಾರ

ಪುಟ : ೪ ಸಂಪುಟ : ೭೦ ಸಂಚಿಕೆ : ೦೬

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

ಶುಭಾಶೀರ್ವಚನ

ಶ್ರೀ ಕ್ಷೇತ್ರ ಹೊಂಬುಜ

## 'ಉತ್ತಮ ಪುರುಷ'

ಸಾಧನೆಯ ಗುರಿಯ ಬೆನ್ನತ್ತಿ ನಡೆಯುವ ಪ್ರತಿಯೊಬ್ಬ ವ್ಯಕ್ತಿಯು ಪ್ರತಿ ಕ್ಷಣಗಳನ್ನು ಸಂಭ್ರಮಿಸುತ್ತಾ ಸಾಗುತ್ತಾನೆ. ಸಾಧನೆಗೆ ಒಳ್ಳೆಯ ಅಥವಾ ಕೆಟ್ಟ ಗಳಿಗೆಯ ನೋಡುತ್ತಾ ಕುಂತಲ್ಲಿ ಮುಂದೆ ಸಾಗಲು ಸಾಧ್ಯವಿಲ್ಲ. ಸಾಧನೆಗೆ ಅಡ್ಡಿ-ಆತಂಕಗಳು ಬರುತ್ತವೆ. ಆದರೆ ಪ್ರತಿಕೂಲ ಸಮಯವನ್ನು ಅನುಕೂಲಕರವಾಗಿ ಮಾಡಿಕೊಂಡು ಮುನ್ನಡೆಯುವವನೇ ಉತ್ತಮ ಪುರುಷ.

ಪ್ರಾರಭ್ಯತೇ ನ ಖಲು ವಿಘ್ನಭಯೇನ ನೀಚೈಃ
ಪ್ರಾರಭ್ಯ ವಿಘ್ನ ವಿಹಿತಾ ವಿರಮಂತಿ ಮಧ್ಯಾಃ।
ವಿಘ್ನೈಃ ಪುನಃ ಪುನರಪಿ ಪ್ರತಿಹನ್ಯ ಮಾನಾಃ
ಪ್ರಾರಭ್ಯ ಚೋತ್ತ ಮಜನಾ ನ ಪರಿತ್ಯಜಂತಿ ॥

WWW.HOMBUJAPADMAVATI.ORG

ವಿಘ್ನಗಳ ಭಯದಿಂದ ಯಾರು ಕಾರ್ಯವನ್ನು ಆರಂಭ ಮಾಡುವುದಿಲ್ಲವೋ ಅವರು ಸಾಮಾನ್ಯ ಪುರುಷ ಎನಿಸಿಕೊಳ್ಳುತ್ತಾನೆ. ಕಾರ್ಯ ಆರಂಭ ಮಾಡಿದ ಮೇಲೆ ವಿಘ್ನಗಳು ಬಂದರೆ ಕೆಲಸವನ್ನು ಅಲ್ಲಿಗೆ ನಿಲ್ಲಿಸುವವನು ಮಧ್ಯಮ ಪುರುಷನು. ಆದರೆ ಯಾರು ಕಾರ್ಯಗಳನ್ನು ಆರಂಭವಾದಗಿನಿಂದ ಎಷ್ಟೇ ವಿಘ್ನಗಳು ಪದೇ-ಪದೇ ಬಂದರು ತಾನು ಅಂದುಕೊಂಡ ಕಾರ್ಯವನ್ನು ಪೂರ್ಣಗೊಳಿಸುತ್ತಾನೋ ಅವನೇ "ಉತ್ತಮ ಪುರುಷ" ಎಂದು ಕರೆಯಲ್ಪಡುತ್ತಾನೆ.

ಸಾಹಸಿಯಾದವ ಸಮಯ ನೋಡುವುದರಲ್ಲಿ ಕಾಲ ಕಳೆಯುವುದಿಲ್ಲ. ಸದಾ ಮುಂದೆ ಸಾಗುತ್ತಾನೆ.

ಅಮವಾಸ್ಯೆಯ ದಿನ ಒಬ್ಬ ವ್ಯಕ್ತಿ ಸ್ನಾನ ಮಾಡಲೆಂದು ಸಮುದ್ರ ತೀರದಲ್ಲಿ ಕುಳಿತಿರುತ್ತಾನೆ. ಇದನ್ನು ಗಮನಿಸಿದ ಒಬ್ಬರು ಆತನ ಬಳಿ ಬಂದು ಸುಮ್ಮನೆ ಕುಳಿತಿರುವ ಕಾರಣ ಕೇಳುತ್ತಾನೆ. ಆಗ ಆತನು **"ಸಮುದ್ರವು ಈಗ ಅಶಾಂತವಾಗಿದೆ. ಅದರಲ್ಲಿ ಎತ್ತರದ ಅಲೆಗಳು ಏಳುತ್ತಿವೆ. ಯಾವಾಗ ಅಲೆಗಳು ನಿಲ್ಲುತ್ತವೆ ಆಗ ನಾನು, ಸಮುದ್ರ ಸ್ನಾನ ಮಾಡಬೇಕೆಂದು ಬಯಸಿದ್ದೇನೆ"** ಎಂದು ಹೇಳುತ್ತಾನೆ.

ಇದನ್ನು ಕೇಳಿದ ವ್ಯಕ್ತಿಯು ನಗುತ್ತಾ **"ಎಂತಹ ಮನುಷ್ಯ ನೀನು. ಸಮುದ್ರದ ಅಲೆಗಳು ಯಾವಾಗ ನಿಲ್ಲುತ್ತವೆ? ಅವು ಬರುತ್ತಲೇ ಇರುತ್ತವೆ. ಸಮುದ್ರದಲ್ಲಿ ಸ್ನಾನ ಅಲೆಗಳ ನಡುವೆಯೇ ಮಾಡುತ್ತಾರೆ. ಇಲ್ಲವಾದಲ್ಲಿ ಎಂದಿಗೂ ನಿನಗೆ ಸ್ನಾನ ಮಾಡಲಾಗುವುದಿಲ್ಲ"** ಎಂದು ಹೇಳುತ್ತಾನೆ.

ನಾವೆಲ್ಲರೂ ಸಂಸಾರದಲ್ಲಿ ಅನುಕೂಲಕರ ಸಮಯದ ಹುಡುಕಾಟದಲ್ಲಿ ಇದ್ದೇವೆ. ನಮ್ಮ ಸಂಕಲ್ಪದ ಕಾರ್ಯಗಳಿಗೆ ಅನುಕೂಲಕರ ಗಳಿಗೆ ಬರುವುದಿಲ್ಲ. ಸಂಸಾರವು ಸಮುದ್ರದಂತೆ, ಅಲೆಗಳು ಹುಟ್ಟುತ್ತಲೆ ಇರುತ್ತವೆ. ಅದನ್ನೆಲ್ಲ ಎದುರಿಸುತ್ತಾ ಸಾಗಬೇಕು. ಸತ್ಕಾರ್ಯ ಅಥವಾ ಶುಭ ಕಾರ್ಯಗಳಿಗೆ ಪ್ರತಿಕ್ಷಣವು ಶುಭವಿದೆ.

ಶುಭವಾಗಲಿ

### ಶುಭ ಹಾರೈಕೆ

ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಫಲಿತಾಂಶದ ಬಳಿಕ ಉತ್ತಮ ವಿದ್ಯಾಭ್ಯಾಸ ಶ್ರೇಯಸ್ಕರವಾಗಲೆಂದು ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ಅಮ್ಮನವರು ಹಾಗೂ ಶ್ರೀ ಸರಸ್ವತಿ ಮಾತೆಯ ಸನ್ನಿಧಿಯಲ್ಲಿ ಪ್ರಾರ್ಥಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹರಸಿದ್ದಾರೆ.

ಭ. ಶ್ರೀ ಮಹಾವೀರ ತೀರ್ಥಂಕರರ ಜನ್ಮ ಕಲ್ಯಾಣದ ಸುದಿನ

## 'ಮಾನವೀಯ ಜೀವನ ಮೌಲ್ಯಗಳು ವಿಶ್ವದೆಲ್ಲೆಡೆ ಪಸರಿಸಲಿ'

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ





**ಹೊಂಬುಜ :** 'ಜೈನ ಧರ್ಮ ಶಾಸ್ತ್ರದ ಉಪದೇಶಗಳು ಕೇವಲ ಜೈನ ಧರ್ಮೀಯರಿಗೆ ಸೀಮಿತವಾಗಿಲ್ಲ. ಮನುಷ್ಯ, ಪಶು, ಪಕ್ಷಿ, ಸಸ್ಯ ಜೀವರಾಶಿ-ಜಲಜೀವಿಗಳ ಪೋಷಣೆ-ರಕ್ಷಣೆಗಾಗಿ ಅಹಿಂಸಾ ಧರ್ಮದ ನೆಲೆಗಟ್ಟಿನಲ್ಲಿ ವಿಶ್ವದ ವಿದ್ಯಮಾನಗಳು ಸಂಘರ್ಷ ತೊರೆದು ಸರಳ-ಸಾತ್ವಿಕ ಮನೋಧರ್ಮ ಪಥದಲ್ಲಿ ಮುಂದುವರಿಯಲು ಜೈನ ಧರ್ಮ ಗ್ರಂಥಗಳಲ್ಲಿ ತೀರ್ಥಂಕರರ ಬೋಧನೆಗಳು ಉಲ್ಲೇಖಿಸಲ್ಪಟ್ಟಿವೆ' ಎಂದು ಅತಿಶಯ ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ

2ನೇ ಪುಟಕ್ಕೆ

## ತ್ರಿಕೂಟ ಜಿನಮಂದಿರದ ವಾರ್ಷಿಕ ಪೂಜಾ ಮಹೋತ್ಸವ



**ಹೊಂಬುಜ :** 'ಸಾಮರಸ್ಯ ಸಮಾಜ ನಿರ್ಮಾಣದ ಜವಾಬ್ದಾರಿ ಪ್ರತಿಯೊಬ್ಬ ಪ್ರಜೆಯ ಹೊಣೆಗಾರಿಕೆಯಾಗಿದ್ದು, ಅನುಷ್ಠಾನಗೊಳಿಸುವಲ್ಲಿ ಜನತೆ ಪ್ರಮುಖ ಪಾತ್ರ ವಹಿಸಬೇಕಿದೆ' ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಆಶೀರ್ವಚನ ನೀಡಿದರು.

ಗುಡ್ಡದ ಬಸದಿ ತ್ರಿಕೂಟ ಜಿನಾಲಯದಲ್ಲಿ ಮೇ. 11ರ ಅಕ್ಷಯ ತೃತೀಯದ ಶುಭ ದಿನದಂದು ವಾರ್ಷಿಕ ಪೂಜಾ ಮಹೋತ್ಸವದ ಪಾವನ ಸಾನಿಧ್ಯ ವಹಿಸಿ

2ನೇ ಪುಟಕ್ಕೆ

ಸಾಮರಸ್ಯ ಜೀವನ ಧರ್ಮವು ಜೈನ ತೀರ್ಥಂಕರರ ವಾಣಿ

## 'ಶಾಂತಿ ನೆಮ್ಮದಿಯ ಸಮಾಜ ಮೌಲ್ಯಯುತವಾದುದು'

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಪದುಬೆಟ್ಟು (ಸವಣೂರು) :** ಶ್ರೀ ಮಹಾವೀರ ಸ್ವಾಮಿ ಬೋಧಿಸಿದ ಜೈನಧರ್ಮದ ಉಪದೇಶಗಳು ಶ್ರೀ ಆದಿನಾಥ ತೀರ್ಥಂಕರರ ಮತ್ತು ಯಕ್ಷ ಯಕ್ಷಿಯರ ಧರ್ಮ ರಕ್ಷಣೆಯ ಪರಂಪರೆಯನ್ನು ಸಾದರಪಡಿಸಿವೆ. ಪ್ರಕೃತಿಯಲ್ಲಿ ಮಾನವ ಸಮಾಜವು ಆಧ್ಯಾತ್ಮಿಕ ಚಿಂತನದ ಧರ್ಮಪರಿಪಾಲನೆ ಮಾಡುವುದರಿಂದ ಪುಣ್ಯಕಾರ್ಯಗಳ ಈಡೇರಿಸುವಿಕೆಗೆ ನಾಂದಿಯಾಗುತ್ತದೆ

2ನೇ ಪುಟಕ್ಕೆ

## ಭ. ಶ್ರೀ ಮಹಾವೀರ ತೀರ್ಥಂಕರರ ಜನ್ಮ ಕಲ್ಯಾಣದ ಸುದಿನ

1ನೇ ಪುಟದಿಂದ

ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರು ಶ್ರೀ ಮಹಾವೀರ ತೀರ್ಥಂಕರ ಜನ್ಮಕಲ್ಯಾಣ ಸುದಿನ ಏ. 21, 2024ರ ಭಾನುವಾರ ನಡೆದ ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದರು.

ಜಗತ್ತಿನಲ್ಲಿ ಶಾಶ್ವತ ಶಾಂತಿ ನೆಲೆಸಲು ಪ್ರತಿಯೊರ್ವರೂ ಮಾನವೀಯ ಮೌಲ್ಯಗಳನ್ನು ನಿತ್ಯ ರೂಢಿಸಿಕೊಂಡು, ಪರಸ್ಪರ ವಾತ್ಸಲ್ಯಮಯಿ ಸಹೋದರ ಭಾವದ ಅನ್ಯೋನ್ಯತೆ ಮಾನಸಿಕ-ಶಾರೀರಿಕ ನೆಮ್ಮದಿ-ಶಾಂತಿ ನೀಡಬಲ್ಲವು ಎಂದ ಶ್ರೀಗಳವರು ಶ್ರೀ ಮಹಾವೀರ ತೀರ್ಥಂಕರರು **'ಬದುಕು, ಬದುಕಲು ಬಿಡು, ಬದುಕಲು ಇನ್ನೊರ್ವರಿಗೆ ತ್ರಿಕರಣ ಪೂರ್ವಕ ಸಹಾಯ-ಸಹಕಾರ ಮಾಡು'** ಎನ್ನುವ ಅಮೂಲ್ಯ ಧರ್ಮಪಥವನ್ನು ನೀಡಿದ್ದಾರೆಂದರು. ರಾಷ್ಟ್ರದ ಏಳಿಗೆಗೆ ಜೈನ ಧರ್ಮದ ಕೊಡುಗೆ ಅಪಾರವಾದುದೆನ್ನುತ್ತಾ ಕ್ಷೇಮಂ ಸರ್ವ ಪ್ರಜಾನಾಂ ಎಂದರು.

**'ಮಹಾಪುರುಷರ ನಡೆ-ನುಡಿಗಳು ಯಾವಾಗಲೂ ಆದರ್ಶವಾಗಿರುತ್ತವೆ. ಗುಡಿ-ಗೋಪುರಗಳನ್ನು ಕಟ್ಟಿ ಪೂಜಿಸುವುದು ಅವರ ಆದರ್ಶ ಗುಣಗಳನ್ನು ಹೊಂದಲೆಂದೇ ವಿನಾ ನಮ್ಮ ಶಕ್ತಿಯ ಅನಾವರಣಕ್ಕಾಗಿ ಅಲ್ಲ. ಮಹೋತ್ಸವ ಜಯಂತಿಗಳು ಸದಾ ನಮ್ಮ ಚೈತನ್ಯ ಶಕ್ತಿಯನ್ನು ಜಾಗೃತಗೊಳಿಸಲು ನೆರವಾಗಬೇಕು ಅಲ್ಲದೇ ಆಡಂಬರವಾಗಬಾರದು. ಅವರ ಆಚರಣೆಗಳಿಂದ ನಮ್ಮಗಳ ಚಲನೆ (ಆಚರಣೆ) ಸರಿದಾರಿಗೆ ಬರಲೆಂಬುದೇ ಉದ್ದೇಶ'** ಎಂದು ಆಶೀರ್ವಚನ ನೀಡಿದರು.

ಶ್ರೀಕ್ಷೇತ್ರದಲ್ಲಿ ಪೂರ್ವಾಹ್ನ ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ನೇಮಿನಾಥ ಸ್ವಾಮಿ, ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಜಿನಾಲಯದಲ್ಲಿ ಪೂಜೆ ಸಲ್ಲಿಸಿ, ಶ್ರೀ ಮಹಾವೀರ ತೀರ್ಥಂಕರರ ಜನ್ಮಕಲ್ಯಾಣಕ ನಾಮಕರಣ, ಉತ್ಸವ, ವಿಶೇಷ ಪೂಜೆಯನ್ನು ಪೂಜ್ಯ ಶ್ರೀಗಳವರು ನೆರವೇರಿಸಿದರು. ಊರ-ಪರವೂರ ಶ್ರಾವಕ-ಶ್ರಾವಿಕೆಯರು ಜಯ ಶ್ರೀ ಮಹಾವೀರ ಸ್ವಾಮಿ, ಅಹಿಂಸಾ ಧರ್ಮ ಕೀ ಜೈ, ಜಯಘೋಷದೊಂದಿಗೆ ಪಲ್ಲಕ್ಕಿ ಸೇವೆಯಲ್ಲಿ ಪಾಲ್ಗೊಂಡರು.

## ತ್ರಿಕೂಟ ಜಿನಮಂದಿರದ ವಾರ್ಷಿಕ ಪೂಜಾ ಮಹೋತ್ಸವ

1ನೇ ಪುಟದಿಂದ

ಆಶೀರ್ವಚನ ನೀಡಿದ ಅವರು ಈ ದಿನ ದಿಗಂಬರ ಮುನಿಗಳಿಗೆ, ವಿಶೇಷವಾಗಿ ಕಬ್ಬಿನ ಹಾಲನ್ನು ಆಹಾರ ದಾನದಲ್ಲಿ ನೀಡುವುದರಿಂದ ದವಸ-ಧಾನ್ಯಗಳು, ಮನೆಯಲ್ಲಿ ಸುಖ-ನೆಮ್ಮದಿ ಅಕ್ಷಯವಾಗಿ ವೃದ್ಧಿಯಾಗುತ್ತದೆ ಎಂದರು.

ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಭಗವಾನ ಶ್ರೀ ಪಾರ್ಶ್ವನಾಥ ಸ್ವಾಮಿ, ಭಗವಾನ ಶ್ರೀ ಶಾಂತಿನಾಥ ಸ್ವಾಮಿ, ಭಗವಾನ ಶ್ರೀ ಬಾಹುಬಲಿ ಸ್ವಾಮಿಗೆ ವಿಶೇಷ ಪಂಚಾಮೃತ ಅಭಿಷೇಕ ಹಾಗೂ 108 ಕಳಶಾಭಿಷೇಕಗಳು ನೆರವೇರಿಸಲಾಯಿತು. ಈ ಸುಸಂದರ್ಭದಲ್ಲಿ ಧರಣೇಂದ್ರ ಯಕ್ಷ ಹಾಗೂ ಪದ್ಮಾವತಿ ದೇವಿಯ ವಿಶೇಷ ಪೂಜಾ ಕಾರ್ಯಗಳು ಸಂಪನ್ನಗೊಂಡವು. ಈ ಮಂಗಳಮಯ ಕಾರ್ಯಕ್ರಮದಲ್ಲಿ ಊರಿನ ಹಾಗೂ ಪರಊರಿನ ಜೈನ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

WWW.HOMBUJAPADMAVATI.ORG

## ಸಾಮರಸ್ಯ ಜೀವನ ಧರ್ಮವು ಜೈನ ತೀರ್ಥಂಕರರ ವಾಣಿ

1ನೇ ಪುಟದಿಂದ

ಎಂದು ಹೊಂಬುಜ ಶ್ರೀ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ತಿಳಿಸಿದರು.

ಶ್ರೀಕ್ಷೇತ್ರ ಪದುಬೆಟ್ಟು ಶ್ರೀ ಚಂದ್ರನಾಥ ಸ್ವಾಮಿ, ಶ್ರೀ ಪದ್ಮಾವತಿ ದೇವಿ ಜಿನಮಂದಿರ ಪುನರ್ ಪ್ರತಿಷ್ಠಾ ಮಹೋತ್ಸವದ 23ನೇ ವಾರ್ಷಿಕೋತ್ಸವದಂದು ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸಿದ ಬಳಿಕ ಮಂಗಲ ಪ್ರವಚನ ಮಾಡುತ್ತಾ ಪ್ರತಿಯೊರ್ವರೂ ವಾತ್ಸಲ್ಯಮಯಿ ಜೀವನ ಮೌಲ್ಯಗಳನ್ನು ರೂಢಿಸಿಕೊಂಡಾಗ ರಾಗಾದಿ ಕ್ಲೇಶಗಳನ್ನು ತ್ಯಜಿಸಿ ಸಾಮರಸ್ಯ ಭಾವನದ ಜೀವನ ನಿರ್ವಹಣೆ, ಶಾಂತಿ-ಆರೋಗ್ಯಪೂರ್ಣ ದೈಹಿಕ ಮಾನಸಿಕ ಸುಖ ಪ್ರಾಪ್ತಿಯಾಗುತ್ತದೆಂದು ಜೈನಧರ್ಮದ ತೀರ್ಥಂಕರರ ಬೋಧನೆಗಳನ್ನು ಸರಳವಾಗಿ ತಿಳಿಸಿದರು. ಪ್ರಸಕ್ತ ವಿದ್ಯಮಾನದಲ್ಲಿ ಪ್ರಕೃತಿಯ ಆರಾಧನೆಯಿಂದ ಮಳೆ-ಬೆಳೆ ಸಮೃದ್ಧವಾಗಲು ಧರ್ಮಬೋಧಗಳ ಮೌಲ್ಯಯುತ ಆಚರಣೆಗಳು ಪೂರಕ ಎನ್ನುತ್ತಾ ಭಕ್ತವೃಂದದವರಿಗೆ ಶ್ರೀಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಪದುಬೆಟ್ಟು ಶ್ರೀಕ್ಷೇತ್ರದ ಅಭಿವೃದ್ಧಿಗೆ ಸಹಕಾರ ನೀಡಿದ ಭಕ್ತರನ್ನು ಗೌರವಿಸಿದರು.

**ಧಾರ್ಮಿಕ ವಿಧಿ-ವಿಧಾನಗಳು:**

ತೋರಣ ಮುಹೂರ್ತ, ವಿಮಾನಶುದ್ಧಿ, ಮಂತ್ರನ್ಯಾಸ, ತಿಲಕನ್ಯಾಸ, ಗಂಧಯಂತ್ರಾರಾಧನೆ, ಶ್ರೀ ಚಂದ್ರನಾಥ ಸ್ವಾಮಿ ಕಲಾರೋಪನೆ, ಮಕ್ಕಳ ಬಸದಿ ಶ್ರೀ ಪಾರ್ಶ್ವನಾಥ ಸ್ವಾಮಿ ಪಂಚಾಮೃತ ಅಭಿಷೇಕ, ಶ್ರೀ ಪದ್ಮಾವತಿ ಆರಾಧನೆ, ಕಲಾರೋಪಣ ಪಲ್ಲಕ್ಕಿ ಉತ್ಸವ, ಪುರಮೆರವಣಿಗೆ, ಸರ್ವಾಹ್ಣ ಯಕ್ಷ ಬಲಿ ಉತ್ಸವ, ಶ್ರೀ ಚಂದ್ರನಾಥ ಸ್ವಾಮಿಗೆ 108 ಕಲಶಾಭಿಷೇಕದೊಂದಿಗೆ ಧಾರ್ಮಿಕ ವಿಧಿ-ವಿಧಾನಗಳು ಸಂಪನ್ನಗೊಂಡವು. ಜಯರಾಜ ಇಂದ್ರ, ಶ್ರೇಯಾಂಸ ಇಂದ್ರ ಸಂಗಡಿಗರು ಪೂಜಾ ವಿಧಿ ನೆರವೇರಿಸಿದರು. ಆಡಳಿತ ಮೊಕ್ತೇಸರ ಶತ್ರುಂಜನ ಆರಿಗ ಸ್ವಾಗತಿಸಿ, ಧನ್ಯವಾದವಿತ್ತರು.

## ಶಾಲಾ ಪ್ರವೇಶ ಪ್ರಾರಂಭ



ಅತಿಶಯ ಶ್ರೀಕ್ಷೇತ್ರ ಹೊಂಬುಜದ ಶ್ರೀ ಹೊಂಬುಜ ಪದ್ಮಾವತಿ ಎಜುಕೇಷನಲ್ ಟ್ರಸ್ಟ್ (ರಿ.) ಆಶ್ರಯದಲ್ಲಿ "ಪರಂಜ್ಯೋತಿ ಆಂಗ್ಲಮಾಧ್ಯಮ ಪ್ರಾಥಮಿಕ ಶಾಲೆ" ನಡೆಯುತ್ತಿದ್ದು, 2024-25ನೇ ಸಾಲಿನಿಂದ **L.K.G. U.K.G.** 1 ರಿಂದ 8ನೇ ತರಗತಿಗಳ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮ ಶಿಕ್ಷಣವನ್ನು ಬೋಧಿಸಲಾಗುತ್ತದೆ.

**ಜಿನ-ದನಿ**

**ಪಂಡಿದೋ ಯ ಜಲಂ ವೇಜ್ಜೋ, ಹೋಜ್ಜ ತತ್ಥ ವಸೇಜ್ಜ ಹು ।**
**ಜತ್ಥಾಸಕ್ಕ-ಸುಕಜ್ಜಾಇಂ, ಉಜ್ಜ್ಹೇಜ್ಜ ತಂ ಗಿಹಂ ವಣಂ ॥ 36 ॥**

**ಅರ್ಥ : ಯಾವ ಕ್ಷೇತ್ರದಲ್ಲಿ ಜಲ, ವೈದ್ಯರು, ಪಂಡಿತರುಗಳು ನಿವಾಸ ಮಾಡುತ್ತಾರೆ ಅಂತಹ ಕ್ಷೇತ್ರದಲ್ಲಿ ವಾಸಿಸಬೇಕು. ಯಾವ ಕ್ಷೇತ್ರದಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲವೋ, ಅಂತಹ ಮನೆ-ವನಗಳನ್ನು ಬಿಟ್ಟುಬಿಡಬೇಕು**

## ಬರಲಿರುವ ಪರ್ವದಿನಗಳು

**ಕ್ರೋಧಿನಾಮ ಸಂವತ್ಸರದ**

**ವೈಶಾಖಮಾಸ ಶುಕ್ಲಪಕ್ಷ ನವಮಿಯಿಂದ ಜ್ಯೇಷ್ಠಮಾಸ ಶುಕ್ಲಪಕ್ಷ ದಶಮಿಯವರೆಗೆ**

**ವೈಶಾಖ ಮಾಸ:**
- ಮೇ. 17 ಶುಕ್ರ-ನವಮಿ-ಪೂರ್ವಾ
- **ಮೇ. 18 ಶನಿ-ದಶಮಿ-ಉತ್ತರ, ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ॥ ದೇವೇಂದ್ರಕೀರ್ತಿ ಭಟ್ಟಾರಕ ಮಹಾ ಸ್ವಾಮೀಜಿ ಗಳವರ ಜನ್ಮದಿವನ.**
- ಮೇ. 19 ಭಾನು-ಏಕಾದಶಿ-ಹಸ್ತಾ
- ಮೇ. 21 ಮಂಗಳ-ತ್ರಯೋದಶಿ-ಸ್ವಾತಿ
- ಮೇ. 22 ಬುಧ-ಚತುರ್ದಶಿ-ಸ್ವಾತಿ
- ಮೇ. 23 ಗುರು-ಹುಣ್ಣಿಮೆ-ವಿಶಾಖ
- ಮೇ. 24 ಶುಕ್ರ-ಪ್ರತಿಪದ-ಅನುರಾಧ
- ಮೇ. 26 ಭಾನು-ತದಿಗೆ-ಮೂಲ
- ಮೇ. 27 ಸೋಮ-ಚತುರ್ಥಿ-ಪೂ.ಷಾ.
- ಮೇ. 28 ಮಂಗಳ-ಪಂಚಮಿ-ಉ.ಷಾ.
- ಮೇ. 29 ಬುಧ-ಷಷ್ಠಿ-ಶ್ರವಣ
- ಮೇ. 30 ಗುರು-ಸಪ್ತಮಿ-ಧನಿಷ್ಠ
- ಮೇ. 31 ಶುಕ್ರ-ಅಷ್ಟಮಿ-ಶತಭಿಷ,
- ಜೂ. 01 ಶನಿ-ನವಮಿ-ದಶಮಿ-ಉ.ಭಾ.
- ಜೂ. 02 ಭಾನು-ಏಕಾದಶಿ-ರೇವತಿ
- ಜೂ. 03 ಸೋಮ-ದ್ವಾದಶಿ-ಅಶ್ವಿನಿ
- ಜೂ. 04 ಮಂಗಳ-ತ್ರಯೋದಶಿ-ಭರಣಿ
- ಜೂ. 05 ಬುಧ-ಚತುರ್ದಶಿ-ಕೃತಿಕಾ
- ಜೂ. 06 ಗುರು-ಅಮಾವಾಸ್ಯೆ-ರೋಹಿಣಿ

**ಜ್ಯೇಷ್ಠ ಮಾಸ:**
- ಜೂ. 07 ಶುಕ್ರ-ಪ್ರತಿಪದ-ಮೃಗಶಿರಾ
- ಜೂ. 08 ಶನಿ-ಬಿದಿಗೆ-ಆರಿದ್ರಾ
- ಜೂ. 09 ಭಾನು-ತದಿಗೆ-ಪುನರ್ವಸು
- **ಜೂ. 10 ಸೋಮ-ಚತುರ್ಥಿ-ಪುಷ್ಯ, ಹೊಂಬುಜ ಕ್ಷೇತ್ರದ ನಗರ ಜಿನಾಲಯ 1008 ಶ್ರೀ ಆದಿನಾಥ ಜಿನಮಂದಿರದ ತೃತೀಯ ವರ್ಷದ ವಾರ್ಷಿಕ ಪೂಜಾ ಮಹೋತ್ಸವ**
- **ಜೂ. 11 ಮಂಗಳ-ಪಂಚಮಿ-ಆಶ್ಲೇಷ, ಶೃತ ಪಂಚಮಿ, ಹೊಂಬುಜ ಕ್ಷೇತ್ರದಲ್ಲಿ ವಿಶೇಷ ಪೂಜೆ, ಸಾಮೂಹಿಕ ಉಪನಯನ, ಅಕ್ಷರಾಭ್ಯಾಸ, ವಿಶೇಷ ಪೂಜೆ.**
- ಜೂ. 12 ಬುಧ-ಷಷ್ಠ-ಮಘಾ
- ಜೂ. 13 ಗುರು-ಸಪ್ತಮಿ-ಪೂರ್ವಾ
- ಜೂ. 14 ಶುಕ್ರ-ಅಷ್ಟಮಿ-ಉತ್ತರ
- ಜೂ. 16 ಭಾನು-ದಶಮಿ-ಹಸ್ತ

## ಗುರುದೇವ ಪತ್ರಿಕೆಯ ಅಜೀವ ಸದಸ್ಯರ ಶುಭನಾಮಾವಳಿಗಳು

**1) ಅಭಿಜಿತ್ ಎ.ಕೆ. ಪುಣೆ 1,000=00**

ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ದಾನ ನೀಡಿದವರಿಗೆ ಶುಭಾಶೀರ್ವಾದ ಮಾಡಿರುತ್ತಾರೆ.

## ಡಾ. ಎಸ್.ಕೆ. ಜೈನ್ ನಿಧನ



ಬೆಂಗಳೂರು : ಇಲ್ಲಿಯ ಖ್ಯಾತ ಜ್ಯೋತಿಷಿ ಡಾ. ಎಸ್.ಕೆ. ಜೈನ್‌ರವರು ದಿನಾಂಕ 12-04-2024ರಂದು ತಮ್ಮ 67ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರಾದ ಇವರು ಬೆಂಗಳೂರಿನಲ್ಲಿ ಬೆಳೆದವರು. ಕನ್ನಡ ನಾಡು ಕಂಡ ಪ್ರಖ್ಯಾತ ಜ್ಯೋತಿಷಿಗಳಲ್ಲಿ ಇವರೂ ಒಬ್ಬರಾಗಿದ್ದರು. ತಂದೆಯವರಾದ ಸ್ವ॥ ಶ್ರೀ ಶಶಿಕಾಂತ ಜೈನ್‌ರವರ ಅನುಭವದೊಂದಿಗೆ ಅಧ್ಯಯನ ಮಾಡಿ ಯಶಸ್ವಿಯಾಗಿದ್ದರು. ದೇಶ-ವಿದೇಶಗಳಲ್ಲಿ ಜ್ಯೋತಿಷ್ಯ, ವಾಸ್ತು ಹಾಗೂ ನಿಮಿತ್ತ ಶಾಸ್ತ್ರಗಳ ಪ್ರಚಾರ-ಪ್ರಸಾರದಲ್ಲಿ ತಮ್ಮನ್ನು ತೊಡಗಿಕೊಂಡು ಶ್ರುತ ಸೇವೆಯನ್ನು ಮಾಡಿರುತ್ತಾರೆ. ಇವರು 20 ವರ್ಷಗಳಿಂದ ಉದಯ ವಾಹಿನಿಯಲ್ಲಿ ಜ್ಯೋತಿಷ್ಯ ಕಾರ್ಯಕ್ರಮ ನಡೆಸಿಕೊಡುವುದರ ಮೂಲಕ ಜನರ ಲೌಕಿಕ ಸಮಸ್ಯೆಗಳ ಜೊತೆಗೆ ಹಬ್ಬ, ಹರಿದಿನ, ಗ್ರಹಣ ಸೇರಿದಂತೆ ವಿಶೇಷ ದಿನಗಳಂದು ನ್ಯೂಸ್ ಚಾನಲ್‌ಗಳಲ್ಲಿ ರಾಶಿ ಫಲಾಫಲ ಸೇರಿ ದಿನದ ವಿಶೇಷತೆಗಳ ಬಗ್ಗೆ ಜ್ಯೋತಿಷ್ಯ ಹೇಳಿ ಪರಿಹಾರ ಮಾಡಲಿಕ್ಕೆ ಪ್ರಯತ್ನಿಸುವ ಮೂಲಕ ಎಲ್ಲರ ಮನೆಮಾತಾಗಿದ್ದರು. ಮಾಧ್ಯಮದ ಮೊಟ್ಟಮೊದಲ ಜ್ಯೋತಿಷಿ ಎಂಬ ಖ್ಯಾತಿಯನ್ನು ಸಹ ಪಡೆದಿದ್ದರು.

ಶ್ರೀಕ್ಷೇತ್ರ ಹೊಂಬುಜದ ಅನನ್ಯ ಭಕ್ತರಾದ ಇವರು ಶ್ರೀಗಳವರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಇವರ ಅಮೂಲ್ಯ ಸೇವೆಯನ್ನು ಗಮನಿಸಿ ದೇಶ ವಿದೇಶಗಳಲ್ಲಿ ಸನ್ಮಾನಿಸಿ ಗೌರವಿಸಲಾಗಿದೆ. ಇವರ ಬಹುಮುಖ ಪ್ರತಿಭೆಗೆ 2014ರಲ್ಲಿ ಶ್ರೀ ಹೊಂಬುಜ ಜೈನ ಮಠದಿಂದ ಸಿದ್ಧಾಂತಕೀರ್ತಿ ಪ್ರಶಸ್ತಿಯನ್ನು ನೀಡಲಾಗಿತ್ತು. ಇತ್ತೀಚೆಗಷ್ಟೆ ಕರ್ನಾಟಕ ಸರ್ಕಾರ ವಿವಿಧ ಕ್ಷೇತ್ರಗಳಲ್ಲಿನ ಅವರ ಕೊಡುಗೆಗಾಗಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತ್ತು. ಹೊಂಬುಜದ ಭ॥ ಶ್ರೀ ಪಾರ್ಶ್ವನಾಥ ಸ್ವಾಮಿ ಹಾಗೂ ಅಭೀಷ್ಟವರ ಪ್ರದಾಯಿನಿ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ಅಗಲಿದ ಡಾ. ಎಸ್.ಕೆ. ಜೈನ್‌ರವರ ಆತ್ಮಕ್ಕೆ ಶಾಂತಿ ನೀಡಲೆಂದು, ಕುಟುಂಬಸ್ಥರಿಗೆ ಅಗಲಿಕೆಯ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲೆಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಸಂತಾಪ ಸೂಚಿಸಿದ್ದಾರೆ.

## ಜಾಗೃತಿ

**ಸರ್ವತ್ರ ಎಲ್ಲರೂ ಹಣ್ಣು, ಹೂವು, ನೆರಳು ನೀಡುವ ಗಿಡಗಳನ್ನು ನೆಟ್ಟು, ಪ್ರಕೃತಿಯ ರಕ್ಷಣೆ ಮಾಡುವ ವೃಕ್ಷ ಪೋಷಣೆ ಧರ್ಮ ಪಾಲಿಸಿ**

# ವಾರ್ಷಿಕ ಪೂಜಾ ಮಹೋತ್ಸವ




**ಹಾಡುವಳ್ಳಿ (ಉ.ಕ.ಜಿಲ್ಲೆ ಭಟ್ಕಳ ತಾಲ್ಲೂಕು) :** ಇಲ್ಲಿಯ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ, ಭಗವಾನ್ 1008 ಶ್ರೀ ಪಾರ್ಶ್ವನಾಥ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀ ಪದ್ಮಾವತಿ ದೇವಿ ಹಾಗೂ ಪರಿವಾರ ದೇವರುಗಳ ವಾರ್ಷಿಕ ಪೂಜಾ ಮಹೋತ್ಸವವು ದಿನಾಂಕ: 11-04-2024 ಗುರುವಾರದಂದು ಸಂಭ್ರಮದಿಂದ ಜರಗಿತು.

ಸೋಂದಾ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ಹಾಗೂ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಉಪಸ್ಥಿತಿಯಲ್ಲಿ ಧಾರ್ಮಿಕ ವಿಧಿ-ವಿಧಾನಗಳು ನೆರವೇರಿದವು.


ಶುದ್ಧಿ ಹೋಮ, ಧ್ವಜಾವರೋಹಣ, ಮಹಾಪುಣ್ಯಾವಾಚನ, ನವಗ್ರಹ ವಿಧಾನ, 24 ತೀರ್ಥಂಕರರಿಗೆ ಅಷ್ಟದ್ರವ್ಯಗಳ ಅಭಿಷೇಕ, ಕಲ್ಯಾಣ ಮಂದಿರ ವಿಧಾನ, ಭಗವಾನ್ ಚಂದ್ರನಾಥ ಸ್ವಾಮಿಗೆ 108 ಕಲಶಗಳ ಅಭಿಷೇಕ, ಅಷ್ಟಾವಧಾನ ಪೂಜೆ ನಡೆಯಿತು. ಇದೇ ಪ್ರಥಮ ಬಾರಿ ಶ್ರೀಕ್ಷೇತ್ರಕ್ಕೆ ಪುರ ಪ್ರವೇಶ ಮಾಡಿದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರಿಗೆ ಪೂರ್ಣ ಕುಂಭ ಕಳಶ, ವಾದ್ಯಘೋಷದೊಂದಿಗೆ ಅದ್ಧೂರಿ ಸ್ವಾಗತ ಮಾಡಲಾಯಿತು.

### ಮಾನಸ್ತಂಭೋಪರಿ ನೂತನ ಜಿನಬಿಂಬಗಳ ಪಂಚಕಲ್ಯಾಣ ಮಹಾಮಹೋತ್ಸವ

## 'ಜೈನ ಧರ್ಮದ ತತ್ವಗಳ ಪಾಲನೆ ಅತ್ಯಗತ್ಯ'

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ

WWW.HOMBUJAPADMAVATI.ORG

**ಕುದರೂರು:** ಇಲ್ಲಿಯ ಶ್ರೀಕ್ಷೇತ್ರ ಬೇರಾಳದಲ್ಲಿ ಶ್ರೀ 1008 ಚಂದ್ರನಾಥ ಸ್ವಾಮಿಯ ಪಂಚಕಲ್ಯಾಣ ಪೂರ್ವಕ ಪ್ರತಿಷ್ಠಾ ಮಹಾಮಹೋತ್ಸವವು 24-04-2024 ರಿಂದ 28-04-2024ರವರೆಗೆ ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹಾಗೂ ಕಂಬದಹಳ್ಳಿಯ ಪರಮಪೂಜ್ಯ ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯ, ಮಾರ್ಗದರ್ಶನದಲ್ಲಿ ವಿಜೃಂಭಣೆಯಿಂದ ಜರುಗಿತು. 5 ದಿನಗಳ ಕಾಲ ಜರುಗಿದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಸೋಂದಾ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು, ಬಸ್ತಿಮಠದ ಪರಮಪೂಜ್ಯ ಸ್ವಸ್ತಿಶ್ರೀ ಲಕ್ಷ್ಮೀಸೇನಾ ಭಟ್ಟಾರಕ ಮಹಾಸ್ವಾಮೀಜಿಯವರು ಉಪಸ್ಥಿತರಿದ್ದರು.

ಧಾರ್ಮಿಕ ಸಭೆಯಲ್ಲಿ ಆಶೀರ್ವಚನ ನೀಡಿದ ಹೊಂಬುಜ ಶ್ರೀಗಳವರು, ಶ್ರಾವಕರು ಷಟ್‌ಕ್ರಿಯೆಗಳನ್ನು ಪಾಲಿಸುವುದರ ಜೊತೆಗೆ ಜೈನಧರ್ಮದ ತತ್ವಗಳನ್ನು ಪಾಲಿಸುವುದು. ಮಕ್ಕಳಿಗೆ ಜೈನ ಧರ್ಮದ ಸಂಸ್ಕಾರಗಳನ್ನು ಚಿಕ್ಕ ವಯಸ್ಸಿನಲ್ಲೇ ಕಲಿಸಬೇಕು ಎಂದರು.

ಸೊಂದಾ ಮಠದ ಸ್ವಾಮೀಜಿಯವರು ಆಶೀರ್ವಚನ ನೀಡಿ, ಪ್ರಾಚೀನ ಬಸದಿಗಳು ಜೀಣೋದ್ಧಾರ ಮಾಡಲು ಶ್ರಾವಕರು ಸಹಕಾರ ನೀಡಬೇಕು ಎಂದರು. ಕಂಬದಹಳ್ಳಿ ಮಠದ ಸ್ವಾಮೀಜಿ ಆಶೀರ್ವಚನ ನೀಡಿ, ತಮ್ಮ ಪೂರ್ವಾಶ್ರಮದ ಊರಿನಲ್ಲಿ ಬಸದಿ ಜೀರ್ಣೋದ್ಧಾರಗೊಂಡ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಂಗವಾಗಿ ಪ್ರತಿದಿನ ಧಾರ್ಮಿಕ ಸಭೆ, ಆರತಿ, ಜಪ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ದಿನಾಂಕ 28-04-24ರಂದು ಶ್ರೀಗಳ ಸಾನಿಧ್ಯದಲ್ಲಿ ಸಾಮೂಹಿಕ ವ್ರತೋಪದೇಶ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಡನಬೈಲ್ ಧರ್ಮದರ್ಶಿ ಶ್ರೀ ವೀರರಾಜ ಜೈನ್, ವಾಗ್ಮಿ ಮುನಿರಾಜ ರೆಂಜಾಳ್ ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಡಾ॥ ಎಸ್.ಪಿ. ಸುಜಾತರವರು ಸಂಪಾದಿಸಿರುವ ಶ್ರೀಕ್ಷೇತ್ರದ ಪರಿಚಯ ಹಾಗೂ ಶ್ರೀ ಚಂದ್ರಪ್ರಭ ಸ್ವಾಮಿಯ ಅಷ್ಟಕಗಳನ್ನು ಒಳಗೊಂಡ 'ಸುಖಸಾಂದ್ರ ಚಂದ್ರ ಜಿನೇಂದ್ರ' ಎಂಬ ಕೃತಿಯನ್ನು ಪರಮಪೂಜ್ಯ ಶ್ರೀಗಳವರು ಬಿಡುಗಡೆಗೊಳಿಸಿದರು.


### ಭಗವಾನ ಶ್ರೀ ಆದಿನಾಥ ತೀರ್ಥಂಕರರ ಬಸದಿ ಜೀರ್ಣೋದ್ಧಾರ

## ಭೂಮಿಪೂಜೆ ಶಿಲಾನ್ಯಾಸ ಕಾರ್ಯಕ್ರಮ



**ಸೋಂದಾ :** ಮಲೆನಾಡಿನ ಶಿರಸಿ ತಾಲ್ಲೂಕಿನ ಸೋಂದಾದ ಶ್ರೀ ಸ್ವಾದಿ ದಿಗಂಬರ ಜೈನ ಮಠದ ಅತೀ ಪ್ರಾಚೀನ ಬಸದಿಯಾದ ಮುತ್ತಿನಕೆರೆಯ ಶ್ರೀ ಆದಿನಾಥ ಸ್ವಾಮಿ ಬಸದಿಯು ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಈ ಬಸದಿಯನ್ನು 10ನೇ ಶತಮಾನದಲ್ಲಿ ಶ್ರೀ ಜಿನದೇವಣ್ಣ, 16ನೇ ಶತಮಾನದಲ್ಲಿ ಶ್ರೀ ಅರಸಪ್ಪನಾಯಕ, 1996ರಲ್ಲಿ ಹಿಂದಿನ ಭಟ್ಟಾರಕರು ಶಿಥಿಲವಾದ ಬಸದಿಯನ್ನು ಜೀರ್ಣೋದ್ಧಾರ ಮಾಡಿಸಿದ್ದಾರೆ. ಈಗ ಪುನಃ ಶಿಥಿಲಗೊಂಡ ಬಸದಿಯನ್ನು ಸಂಪೂರ್ಣವಾಗಿ ಶಿಲಾಮಯವಾಗಿ ಜೀರ್ಣೋದ್ಧಾರ ಮಾಡಬೇಕೆಂದು ಸಂಕಲ್ಪ ಮಾಡಿ ಭಗವಂತರನ್ನು ಬಾಲಾಲಯದಲ್ಲಿ ಸ್ಥಾಪಿಸಲಾಗಿದೆ. ಈ ಬಸದಿಯ ಭೂಮಿಪೂಜೆ ಶಿಲಾನ್ಯಾಸ ಕಾರ್ಯಕ್ರಮವು ಯುಗಳ ಮುನಿಗಳಾದ ಮುನಿಶ್ರೀ 108 ಅಮರಕೀರ್ತಿ ಮಹಾರಾಜರು ಮತ್ತು ಮುನಿಶ್ರೀ 108 ಅಮೋಘಕೀರ್ತಿ ಮಹಾರಾಜರ ಪಾವನ ಸಾನಿಧ್ಯದಲ್ಲಿ ಹಾಗೂ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಗಳವರ ಮಾರ್ಗದರ್ಶನ ಹಾಗೂ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ದಿವ್ಯಸಾನಿಧ್ಯದಲ್ಲಿ ಕ್ರೋಧಿ ನಾಮ ಸಂವತ್ಸರದ ಚೈತ್ರ ಶುದ್ಧ ಚತುರ್ಥಿಯ ಏ. 12, 2024ರ ಶುಕ್ರವಾರದಂದು ನೆರವೇರಿತು.

ಅಂದು ಬೆಳಿಗ್ಗೆ ಸುಪ್ರಭಾತ, ಮಂಗಲವಾದ್ಯ ಶ್ರೀ ಜಿನರಿಗೆ ಪಂಚಾಮೃತ ಅಭಿಷೇಕ, ಭಕ್ತಾಮರ ವಿಧಾನ, ಕೂರ್ಮಶಿಲೆ, ಶ್ರೀ ನಿಧಿ ಕಲಶ, ಯಂತ್ರ ಸ್ಥಾಪನೆ, ಮುನಿಶ್ರೀಗಳವರ ಪ್ರವಚನ ಆಶೀರ್ವಚನ ಕಾರ್ಯಕ್ರಮಗಳು ನೆರವೇರಿದವು.



## ಶ್ರುತ ಪಂಚಮಿ ಆಚರಣೆ



ಅತಿಶಯ ಶ್ರೀಕ್ಷೇತ್ರ ಹೊಂಬುಜದಲ್ಲಿ ಪೂರ್ವ ಪರಂಪರೆಯಂತೆ ನಡೆದುಕೊಂಡು ಬಂದಿರುವ ಶ್ರುತ ಪಂಚಮಿ ಮಹೋತ್ಸವವನ್ನು ಜೂನ್. 11, 2024ರ ಮಂಗಳವಾರದಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಗಳವರ ಪಾವನ ಸಾನಿಧ್ಯ ಹಾಗೂ ಮಾರ್ಗದರ್ಶನದಲ್ಲಿ ನೆರವೇರಲಿದೆ. ಅಂದು 8 ವರ್ಷ ಮೇಲ್ಪಟ್ಟ ಜೈನ ಬಾಲಕ-ಬಾಲಕಿಯರಿಗೆ ಸಾಮೂಹಿಕ ವ್ರತೋಪದೇಶ ಹಾಗೂ ಎರಡರಿಂದ ಮೂರು ವರ್ಷದ ಮಕ್ಕಳಿಗೆ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಂದು ವಿಶೇಷ ಜಿನಪೂಜೆಯೊಂದಿಗೆ ಶಾಸ್ತ್ರಗಳನ್ನು ಪೂಜಿಸಿ, ಪಠಿಸಿ ಜಿನವಾಣಿಗೆ ಭಕ್ತಿಭಾವದ ನಮನ ಸಲ್ಲಿಸಲಾಗುವುದು. ಸದ್ಧರ್ಮ ಬಾಂಧವರು ಈ ಪೂಜಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ. ವ್ರತೋಪದೇಶ ಹಾಗೂ ಅಕ್ಷರಾಭ್ಯಾಸದಲ್ಲಿ ಭಾಗವಹಿಸುವವರು ಶ್ರೀಮಠದ ಆಡಳಿತ ಕಾರ್ಯಾಲಯದಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.

ಸಂಪರ್ಕ: 08185-262722, 9481453653, 9483801460

## ಬಿಂಬ ಸ್ಥಾಪನೆ ಮತ್ತು ಭ| 1008 ಶ್ರೀ ಮಹಾವೀರ ಜಯಂತ್ಯೋತ್ಸವ

# "ಜೈನ ಧರ್ಮ ವ್ಯಕ್ತಿ ಪ್ರಧಾನವಲ್ಲ"

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ




**ಬೆಳ್ತಂಗಡಿ : ಜೈನಧರ್ಮವು ಗುಣಪ್ರಧಾನ ಮತ್ತು ಕರ್ಮಪ್ರಧಾನ ಧರ್ಮವಾಗಿದೆ. ವ್ಯಕ್ತಿಪ್ರಧಾನ ಧರ್ಮ ಅಲ್ಲ** ಎಂದು ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಬೆಳ್ತಂಗಡಿ ಜೈನಪೇಟೆಯಲ್ಲಿರುವ ರತ್ನತ್ರಯ ತೀರ್ಥಕ್ಷೇತ್ರದಲ್ಲಿ ದಿನಾಂಕ 21-04-2024ರ ಭಾನುವಾರದಂದು ಭಗವಾನ ಶ್ರೀ ಮಹಾವೀರ ಜಯಂತಿ ಸಂದರ್ಭ ಪ್ರವಚನ ನೀಡಿದರು.

ಅಹಿಂಸೆಯು ಜೈನ ಧರ್ಮದ ಶ್ರೇಷ್ಠ ತತ್ವವಾಗಿದೆ. ಭಗವಾನ ಮಹಾವೀರ ತೀರ್ಥಂಕರರು ಬೋಧಿಸಿದ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಮೊದಲಾದ ಪಂಚಾಣುವ್ರತಗಳನ್ನು ನಿತ್ಯವೂ ಪಾಲನೆ ಮಾಡಬೇಕು. ಜೀವನ ಪರ್ಯಂತ ಒಂದು ವ್ರತವನ್ನಾದರೂ ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದರು.

ವೃದ್ಧಾಪ್ಯದಲ್ಲಿ ತಾಯಿಯ ಶುಶ್ರೂಷೆಯನ್ನು ಮಾಡುತ್ತಿರುವ ಹೊಸಮೊಗ್ರು ರಾಜೇಶ್ ಮತ್ತು ವನಿತಾ ರಾಜೇಶ್ ಅವರನ್ನು 'ಮಾತೃ ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬಸದಿಯ ಸ್ವಚ್ಛತೆ, ನಿರ್ವಹಣೆ ಮತ್ತು ಆಡಳಿಯ ಕ್ರಮದ ಬಗ್ಗೆ ಅನುವಂಶಿಕ ಆಡಳಿತ ಮೊಕ್ತೇಸರರಾದ ಶ್ರೀ ಕೆ. ಜಯವರ್ಮರಾಜ ಬಳ್ಳಾಲ್ ಅವರನ್ನು ಸ್ವಾಮೀಜಿ ಅಭಿನಂದಿಸಿದರು.

ಡಾ. ಕೆ. ಜೀವಂಧರ ಬಳ್ಳಾಲ್, ಕೆ. ರಾಜವರ್ಮ ಬಳ್ಳಾಲ್, ಸುಮತಿ ಆರ್. ಬಳ್ಳಾಲ್, ಡಾ. ಆರ್. ಮಾಲತಿ, ವಿನಯ ಜೆ. ಬಳ್ಳಾಲ್, ಡಾ. ಪ್ರಿಯಾ ಬಳ್ಳಾಲ್, ಕೆ. ಪ್ರಸನ್ನ ಕುಮಾರ್, ದಿಲೀಪ್ ಬಳ್ಳಾಲ್, ಎಂ. ಜಿನರಾಜ ಶೆಟ್ಟಿ, ಶಿಕ್ಷಕ ಧರಣೇಂದ್ರ ಭಾಗವಹಿಸಿದ್ದರು.

**ಧಾರ್ಮಿಕ ವಿಧಿ-ವಿಧಾನಗಳು:** ಅಂದು ತೋರಣ ಮುಹೂರ್ತ, ಚತುವಿಂಶತಿ ತೀರ್ಥಂಕರರ ಆರಾಧನೆ, ಭ| ಶ್ರೀ ಮಹಾವೀರ ಸ್ವಾಮಿಗೆ ನವಕಳಶಾಭಿಷೇಕ, ಭ|ಶ್ರೀ ಶಾಂತಿನಾಥ ಸ್ವಾಮಿಗೆ 108 ಕಲಶಗಳಿಂದ ಮಹಾಭಿ ಷೇಕ ಮತ್ತು ಭ| ಶ್ರೀ ಅನಂತನಾಥ ಸ್ವಾಮಿ, ಭ| ಶ್ರೀ ಚಂದ್ರನಾಥ ಸ್ವಾಮಿ, ಭ|ಶ್ರೀ ಪಾರ್ಶ್ವನಾಥ ಸ್ವಾಮಿ ಬಸದಿಗಳಲ್ಲಿ ನವಕಲಶಾಭಿಷೇಕ, ಬಳಿಕ ನೂತನ ಗಂಧಕುಟಿಯಲ್ಲಿ 24 ತೀರ್ಥಂಕರರ ಬಿಂಬ ಸ್ಥಾಪನೆ, ಮಹಾಪೂಜೆ, ಮಹಾಮಾತೆ ಶ್ರೀ ಪದ್ಮಾವತಿ ಅಮ್ಮನವರಿಗೆ ಅಲಂಕಾರ ಪೂಜೆ, ಶ್ರೀ ಬ್ರಹ್ಮಯಕ್ಷ ದೇವರಿಗೆ ವಿಶೇಷ ಪೂಜೆ, ಹಾಗೂ ಸಂಘಸಂತರ್ಪಣೆ, ಅಪರಾಹ್ನ ಭ| 1008 ಶ್ರೀ ಮಹಾವೀರ ಸ್ವಾಮಿ ಜಯಂತ್ಯೋತ್ಸವ ಕಾರ್ಯಕ್ರಮವು ಪೂಜ್ಯ ಶ್ರೀಗಳ ಉಪಸ್ಥಿತಿಯಲ್ಲಿ ನೆರವೇರಿತು. ಪೂಜ್ಯ ಶ್ರೀಗಳ ಪಾದಪೂಜೆ ಬಳಿಕ ಸಾಯಂಕಾಲ ಗೋಧೋಳಿ ಲಗ್ನದಲ್ಲಿ ನೂತನ ಘಂಟಾಮಂಟಪ ಹಾಗೂ ಜಲಧಾರ ಲೋಕಾರ್ಪಣೆ ಕಾರ್ಯಕ್ರಮಗಳು ನೆರವೇರಿದವು.

## ಇಚಲಂಪಾಡಿ ಬಸದಿಗೆ ಹೊಂಬುಜ ಶ್ರೀಗಳು



ಕಡಬ ತಾಲ್ಲೂಕಿನ ಇಚಲಂಪಾಡಿಯ ಶ್ರೀ ಅನಂತನಾಥ ಸ್ವಾಮಿ ಜಿನಮಂದಿರ ದರ್ಶನಾರ್ಥ ಹೊಂಬುಜ ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಗುರುವಾರ ಮೇ 9 ರಂದು ಆಗಮಿಸಿದ್ದರು. ಸೊಗಸಾದ ಜೈನ ಆಗಮೋಕ್ತ ವಾಸ್ತು ವಿನ್ಯಾಸದಲ್ಲಿ ನಿರ್ಮಿಸಿದ ಜಿನಾಲಯ ವೀಕ್ಷಿಸಿ, ಧರ್ಮ ಬಂಧುಗಳಿಗೆ ಶ್ರೀಫಲ ನೀಡಿ ಆಶೀರ್ವದಿಸಿದರು. ಜಿನಮಂದಿರದ ಆಡಳಿತ ಸಮಿತಿ ಸದಸ್ಯರು, ಶ್ರಾವಕ, ಶ್ರಾವಿಕೆಯರು ಸ್ವಾಗತಿಸಿದರು.

## ಪಂಚಕಲ್ಯಾಣ ಪ್ರತಿಷ್ಠಾ ಮಹಾಮಹೋತ್ಸವ

# "ಬಾಳಿನಲ್ಲಿ ಗುರುವಿನ ಪಾತ್ರ ಬಹುಮುಖ್ಯ"

### ಪ್ರಥಮ ಬಾರಿಗೆ ಭಟ್ಟಾರಕರಿಗೆ ಭಕ್ತಿಯ ತುಲಾಭಾರ-ಗುರುವಿನ ಸನ್ಮಾರ್ಗ ಪಡೆಯಲು ಕರೆ

-ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



ಕಲಬುರಗಿ (ಹುಣಸೆಹಡಗಿಲ) : **'ಮನುಷ್ಯನ ಬದುಕಿಗೆ ಗುರುವಿನ ಸನ್ಮಾರ್ಗ ದರ್ಶನ ಅವಶ್ಯವಾದುದ್ದು. ಅಂಧಕಾರ ಹೊಡೆದೊಡಿಸಿ ಸಂಸ್ಕಾರ ಮತ್ತು ಸಂಸ್ಕೃತಿ ಬಿತ್ತುವ ಗುರುವಿನ ಪಾತ್ರ ಬಹುಮುಖ್ಯವಾಗಿದೆ'** ಎಂದು ಶ್ರೀಕ್ಷೇತ್ರ ಹೊಂಬುಜ ಜೈನ ಮಠದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ಹೇಳಿದರು.

ತಾಲ್ಲೂಕಿನ ಸುಕ್ಷೇತ್ರ ಹುಣಸೆಹಡಗಿಲ ಗ್ರಾಮದಲ್ಲಿರುವ ದಿಗಂಬರ ಜೈನ ಮಹಾಸಭಾ ಲಕ್ನೋ ಅವರ ಸಹಯೋಗದಿಂದ ಜೀರ್ಣೋದ್ಧಾರವಾದ ಪುರಾತನ ತ್ರಿಕೂಟ ಜಿನಮಂದಿರದ ಶ್ರೀ ಶಾಂತಿನಾಥ ಭಗವಾನ ಮಂದಿರದ ಧಾಮಸಂಪ್ರೋಕ್ಷಣ ಹಾಗೂ ಜಿನಬಿಂಬ ಶುದ್ಧಿ ಶ್ರೀ ಮುನಿಸುವ್ರತನಾಥ ಭಗವಾನರ ಹಾಗೂ ಶ್ರೀ ಮಹಾವೀರ ಭಗವಾನರ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದ ಮೂರನೇ ದಿನದ ರಾಜ್ಯಾಭಿಷೇಕ ಸಮಾರಂಭದ ನೇತೃತ್ವ ವಹಿಸಿ, 'ಜೈನ ಪರಂಪರೆಯಲ್ಲಿಯೇ ಪ್ರಥಮ ಬಾರಿಗೆ ಭಕ್ತರಿಂದ ಭಟ್ಟಾರಕರಿಗೆ ಭಕ್ತಿಯ ತುಲಾಭಾರ' ಮಾಡಲಾಯಿತು. ಸದ್ಭಾಕ್ತಾದಿಗಳು ಭಕ್ತಿಪೂರ್ವಕವಾಗಿ ಸಮರ್ಪಿಸಿದ ತುಲಾಭಾರ ಸೇವೆಯನ್ನು ಸ್ವೀಕರಿಸಿ ಆಶೀರ್ವಚನ ನೀಡಿ, **'ಗುರು ಕಣ್ಣಿಗೆ ಕಾಣುವ ದೇವರಾಗಿದ್ದು, ಭಕ್ತ ಸಂಕುಲಕ್ಕೆ ಸದಾ ಬೆಳಕಾಗಿ ಬಾಳು ಬೆಳಗಿಸುವ ದಿವ್ಯ ಶಕ್ತಿಯಾಗಿದೆ'** ಎಂದರು.

ಸಾವಿರಾರು ವರ್ಷಗಳಿಂದ ನಡೆದು ಬಂದ ಗುರು-ಶಿಷ್ಯ ಪರಂಪರೆ ಇಂದು ಮತ್ತಷ್ಟು ಗಟ್ಟಿಗೊಳಿಸಬೇಕಾಗಿದೆ. ಭಕ್ತರ ನಿಷ್ಕಲ್ಮಶ ಭಕ್ತಿಗೆ ಅಧಿಕಾರ, ಹಣ, ಸಂಪತ್ತು, ಸಿರಿ, ಜಾತಿ, ಮತದ ಅಗತ್ಯವಿಲ್ಲ. ಪ್ರೀತಿ ಮತ್ತು ವಾತ್ಸಲ್ಯವೇ ಭಕ್ತರ ನಿಜವಾದ ಭಕ್ತಿಯಾಗಿ ನಿರಂತರವಾಗಿರುತ್ತದೆ ಎಂದು ಮಹಾಸ್ವಾಮಿಗಳು ಭಾವುಕರಾಗಿ ನುಡಿದರು. ಸನ್ಯಾಸಿಗಳಿಗೆ ಸಮಾಜವೇ ಬಂಧು ಬಳಗವಾಗಿದ್ದು ಸದಾ ಗೌರವಿಸುವ ಪ್ರೀತಿಸುವ ಭಕ್ತರನ್ನು ಹೊಂದಿರುವ ನಮಗೆ ಅತೀವ ಸಂತಸ ತಂದಿದೆ ಎಂದರು.

ಪ್ರಜ್ಞಾಶ್ರವಣ ಸಾರಸತ್ವಾಚಾರ್ಯ ಶ್ರೀದೇವನಂದಿ ಮುನಿಮಹಾರಾಜರ ಮಾರ್ಗದರ್ಶನದಲ್ಲಿ, ಶ್ರೀ ಸಕಲಕೀರ್ತಿ ಮುನಿಮಹಾರಾಜರು, ಅರ್ಕಕೀರ್ತಿ ಕ್ಷುಲ್ಲಕರು ಅವರ ದಿವ್ಯ ಸಾನಿಧ್ಯದಲ್ಲಿ ಹುಬ್ಬಳ್ಳಿಯ ನವಗ್ರಹ ತೀರ್ಥ ಕ್ಷೇತ್ರದ ಪರಮಪೂಜ್ಯ ಸ್ವಸ್ತಿಶ್ರೀ ಧರ್ಮಸೇನಾ ಭಟ್ಟಾರಕ ಮಹಾಸ್ವಾಮಿಜಿಯವರು ಉಪಸ್ಥಿತರಿದ್ದರು.

ಟ್ರಸ್ಟ್‌ನ ವಿಜಯಕುಮಾರ ಕಿವಡೆ, ನೇಮಿನಾಥ ಬೆಳಕೇರಿ, ಪ್ರಕಾಶ ಜೈನ್, ವಜ್ರಕುಮಾರ್ ಪಾಟೀಲ, ಅರಿಹಂತ ಪಾಟೀಲ, ರಾಜಕುಮಾರ ಕುವಡೆ, ಅಜಿತ ಕಾಸಾರ, ಸುರೇಶ್ ತಂಗಾ, ಮಹಾವೀರ ಬಪ್ಪಣಕರ್, ಅನಿಲ ಭಸ್ಮೇ, ರಾಜೇಂದ್ರ ಕುಣಚಗಿ, ಅನಿಲ ಜಂಬಗೆ, ರತನಕುಮಾರ ಹೊಸಳ್ಳೆ, ಜೀತು ಚಿಂದೆ, ಕಿರಣ ಪಂಡಿತ್, ರಮೇಶ ಬೆಳಕೇರಿ ಮತ್ತು ಸಕಲ ಹುಣಸಿಹಡಗಿಲ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಪುತ್ತೂರು ಬಸದಿಗೆ ಹೊಂಬುಜ ಶ್ರೀಗಳು



ಪುತ್ತೂರು : ಹೊಂಬುಜ ಶ್ರೀಕ್ಷೇತ್ರದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರು ನಗರದ ದಿಗಂಬರ ಜೈನ ಶಾಂತಿನಾಥ ತೀರ್ಥಂಕರ, ಶ್ರೀ ಪದ್ಮಾವತಿ ದೇವಿ ಜಿನಮಂದಿರಕ್ಕೆ ದರ್ಶನಾರ್ಥ ಆಗಮಿಸಿದರು. ದೇವರಿಗೆ ವಿಶೇಷ ಪೂಜೆ ಸಲ್ಲಿಸಿದ ಸ್ವಾಮೀಜಿಯವರು ಅಭಿವೃದ್ಧಿ ಯೋಜನೆಗಳ ಕುರಿತು ಆಡಳಿತ ಸಮಿತಿ ಸದಸ್ಯರೊಂದಿಗೆ ಸಮಾಲೋಚಿಸಿದರು. ಪರಂಪರಾನುಗತ ಪೂಜಾ ವಿಧಿ-ವಿಧಾನಗಳು, ಅಭಿವೃದ್ಧಿ ಕಾರ್ಯಗಳು ನೆರವೇರಲಿ ಎಂದು ಹರಸಿದರು.

ಗುರುದೇವ

GURUDEVA MONTHLY

RNI No. 13248/57-POSTEL REGD No. KA/SK/SMG 198/2024-26

Date of Posting 17th of every month. Sub Post office, Humcha - 577436

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722

WWW.HOMBUJAPADMAVATI.ORG